

ಒಬ್ಬ ವ್ಯಕ್ತಿ ಹುಚ್ಚಾಸ್ಪತ್ರೆಗೆ ದೂರವಾಣಿ ಕರೆ ಮಾಡಿದ: 'ನಾನು 27ನೇ ಕೋಣೆಯ ರೋಗಿಯ ಜೊತೆ ಮಾತಾಡಬೇಕು'

ಸ್ವಾಗತಗಾರ ಕೋಣೆಯ ಹತ್ತಿರ ಹೋಗಿ ನೋಡಿ ಬಂದು 'ಇಲ್ಲ ಸ್ವಾಮಿ, ಆ ಕೋಣೆಯಲ್ಲಿ ಯಾರೂ ಇಲ್ಲ.' ಎಂದ.

ಆ ಕಡೆಯಿಂದ 'ಒಳ್ಳೆಯದು. ನಾನು ತಪ್ಪಿಸಿಕೊಂಡಿದ್ದೇನೆ ಎಂಬುದು ಖಾತ್ರಿಯಾಯಿತು!' ಎಂಬ ಧ್ವನಿ ಕೇಳಿಸಿತು!

★★★

ಗುಂಡ ಹೃದಯ ರೋಗದ ವೈದ್ಯರ ಕೊಠಡಿಯನ್ನು ಪ್ರವೇಶಿಸಿದ.

ಗುಂಡ: 'ನನಗೆ ಸಹಾಯ ಬೇಕು. ನಾನು ದೀಪದ ಹುಳು ಎಂದೆನಿಸುತ್ತಿದೆ.'

ವೈದ್ಯ: 'ಹಾಗಾದರೆ ಮನೋವೈದ್ಯರ ಬಳಿ ಹೋಗಬೇಕು.'

ಗುಂಡ: 'ಹೌದು, ನನಗೆ ಗೊತ್ತು.'

ವೈದ್ಯ: 'ಮತ್ತೆ ಇಲ್ಲಿಗೆ ಯಾಕೆ ಬಂದೆ?'

ಗುಂಡ: 'ನಿಮ್ಮ ಕೊಠಡಿಯ ದೀಪ ಕಂಡೆ.'

★★★

ನರ್ಸ್ ರೋಗಿಯನ್ನು ಕೇಳಿದಳು 'ಶಸ್ತ್ರ ಚಿಕಿತ್ಸೆ ಕೊಠಡಿಯಿಂದ ಏಕೆ ಓಡಿಹೋದೆ?'

ಗುಂಡ: ಆಪರೇಷನ್ ರೂಮ್‌ನ ನರ್ಸ್ 'ಯಾತಕ್ಕೆ ಭಯ? ಇದು ಸರಳ ಅಪೆಂಡಿಕ್ಸ್ ಚಿಕಿತ್ಸೆ' ಎಂದಳು, ಅದಕ್ಕೆ.'

ನರ್ಸ್: 'ಸರಳ ಎಂದಳಲ್ಲ, ಮತ್ತೇಕೆ ಓಡಿ ಹೋಗಬೇಕಿತ್ತು?'

ರೋಗಿ: 'ಅವಳು ನನಗೆ ಹೇಳಿದ್ದಲ್ಲ– ವೈದ್ಯರಿಗೆ ಹೇಳಿದ್ದು!'

(ಸಂಗ್ರಹ) **ಎಸ್.ಆರ್.ದೇವಪ್ರಕಾಶ್, ತುಮಕೂರು**

ಗುಂಡ: ಏನೇ.. ಈ ಹೊಸ ಷರ್ಟ್ ಒಗೆದಿದ್ದೀಯಾ?

ಹೆಂಡತಿ: ನೆಕ್ನೋಡಿ.

ಗುಂಡ: ಏನಂದೆ...? ನಾನು ಷರ್ಟ್‌ನ ನೆಕ್ಕಬೇಕಾ?

ಹೆಂಡತಿ: ಹಾಗಲ್ಲಾರೀ ಆ ಷರ್ಟಿನ ನೆಕ್ ನೋಡಿ, ಅಂದ್ರೆ.. ಕಾಲರ್ ನೋಡಿ. ಕೊಳೆ ಇದ್ರೆ ಒಗೆದಿಲ್ಲಾ ಅಂತ!

★★★

ಅಂಕಲ್: ಅಯ್ಯೋ ಸೈಕಲಿಂದ ಬಿದ್ದು ಬಿಟ್ಯಾ ಮರಿ?

ಮರಿ: ಇಲ್ಲಾ ಅಂಕಲ್ ನಾನಿಳಿಯೋದೇ ಹೀಗೆ!

★★★

ಹೆಂಡತಿ: ದೇವರೆ ಏಳೇಳು ಜನ್ಮಕ್ಕೂ ಇವರೇ ನನ್ನ ಪತಿಯಾಗಲಿ

ಗಂಡ: ದೇವರೇ ನನಗೆ ಈ ಜನ್ಮವೇ ಏಳನೇ ಜನ್ಮವಾಗಲಿ!

(ಸಂಗ್ರಹ) **ಎಂ.ಆರ್.ಮುಕುಂದ**



**ಆಧಾರ್ ಲಿಂಕ್**

ಅಪ್ಪ: ಪರೀಕ್ಷೆ ರಿಸಲ್ಟ್ ಏನಾಯ್ತೋ ತಿಮ್ಮಾ..?

ತಿಮ್ಮ: 80% ಬಂತು ಕಣಪ್ಪಾ..

ಅಪ್ಪ: ಮಾರ್ಕ್ಸ್ ಕಾರ್ಡ್‌ನಲ್ಲಿ ಬರೀ 40% ಮಾತ್ರ ಇದೆಯಲ್ಲೋ..?

ತಿಮ್ಮ: ಬಾಕಿ 40% ಆಧಾರ್ ಕಾರ್ಡ್ ಲಿಂಕ್ ಆಗಿರೋದಕ್ಕೆ ಡೈರೆಕ್ಟಾಗಿ ನನ್ ಅಕೌಂಟ್ ಗೆ ಜಮಾ ಮಾಡ್ತಾರಂತಪ್ಪಾ..!

★★★



**ಕೋಳಿ ಹೆಸರು**

ಕೋಳಿಮರಿ: ಅಮ್ಮಾ, ಮನುಷ್ಯರು ಹುಟ್ಟಿದ ಕೂಡಲೇ ಚಂದ ಚಂದದ ಹೆಸರಿಡ್ತಾರೆ. ನಮಗ್ಯಾಕಮ್ಮಾ ಯಾರೂ ಹೆಸರು ಇಡಲ್ಲಾ..?

ಅಮ್ಮ ಕೋಳಿ: ಮರೀ.. ಅವರಿಗೆಲ್ಲಾ ಹುಟ್ಟಿದ ಮೇಲೆ ಹೆಸರಿಡ್ತಾರೆ. ನಮಗೆ ಸತ್ತ ಮೇಲೆ ಹೆಸರಿಡ್ತಾರೆ. ಚಿಕನ್ ಚಿಲ್ಲಿ, ಚಿಕನ್ ತಂದೂರಿ, ಚಿಕನ್ ಲಾಲಿಪಾಪ್, ಚಿಕನ್ 65 ಅಂತಾ..!

★★★

**ಫಿಫ್ಟಿ– ಫಿಫ್ಟಿ**

ಸಂತ ಬಂತರಿಗೆ ದಾರೀಲಿ 1000 ರೂ ಸಿಕ್ಕಿತು..

ಸಂತ: ಇದನ್ನು ಏನು ಮಾಡೋಣಾ..?

ಬಂತ: ಫಿಫ್ಟಿ– ಫಿಫ್ಟಿ ಹಂಚಿಕೊಳ್ಳೋಣ.

ಸಂತ: ಹಾಗಾದ್ರೆ ಉಳಿದ 900 ರೂಪಾಯಿ ಏನು ಮಾಡೋಣ?!

(ಸಂಗ್ರಹ) **ಪ.ನಾ.ಹಳ್ಳಿ.ಹರೀಶ್ ಕುಮಾರ್**